ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2490
ಸದಸ್ಯರ ಹೆಸರು	:	ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	23-03-2022.
ಉತ್ತರಿಸುವ ಸಚಿವರು	:	ಲೋಕೋಪಯೋಗಿ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಷ್ಟ್ರೀಯ ಹೆದ್ದಾರಿ-66ರಲ್ಲಿ ಚತುಷ್ಪಥ ರಸ್ತೆಯ ನಿರ್ಮಾಣಕ್ಕೆ ಅಗತ್ಯಕ್ಕಿಂತ ಹೆಚ್ಚುವರಿಯಾಗಿ ಭೂಸ್ವಾಧೀನ ಮಾಡಿಕೊಂಡ ಪ್ರಕರಣಗಳು ಯಾವುವು;	ರಾಷ್ಟ್ರೀಯ ಹೆದ್ದಾರಿ-66ರ ಹೆದ್ದಾರಿಯು ಗೋವಾ-ಕರ್ನಾಟಕ ಗಡಿಯಿಂದ ತಲಪಾಡಿ ಗಡಿ ಭಾಗದವರೆಗೆ ಇದ್ದು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇವರ ಸುಪರ್ದಿಯಲ್ಲಿರುತ್ತದೆ. ಸದರಿ ಹೆದ್ದಾರಿಯ ಚತುಷ್ಪಥ ರಸ್ತೆಯ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರು ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಯ ಅನುಮೋದಿತ Detailed Project Report ಮತ್ತು ಕರಾರು ಒಪ್ಪಂದದಲ್ಲಿನ ನಿಬಂಧನೆಗಳನ್ವಯ ಭೂಸ್ವಾಧೀನವನ್ನು ಕೈಗೊಳ್ಳಲಾಗಿದೆ. ಮುಂದುವರೆದು, ಕೆಲವು ಭಾಗಗಳಲ್ಲಿ ಇಳಿಜಾರು ಸ್ಥಿರತೆ ಮತ್ತು ಸುರಕ್ಷತೆಯನ್ನು ಹೊಂದಲು ಎತ್ತರಕ್ಕಿಂತ ಕತ್ತರಿಸುವಿಕೆ (cutting) ಮತ್ತು ತುಂಬುವಿಕೆ (Filling) ಅವಶ್ಯವಿದ್ದು ಈ ಭಾಗಗಳಲ್ಲಿ ಹೆಚ್ಚುವರಿಯಾಗಿ ಅರಣ್ಯ ಮತ್ತು ಇತರೆ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.
ಆ)	ಈ ಭೂಸ್ವಾಧೀನದಲ್ಲಿ ಪಟ್ಟಾ ಜಮೀನಿನ 90% ಭೂಸ್ವಾಧೀನ ಪಡೆದುಕೊಂದು ಬಾಕಿಯುಳಿದ 10% ಜಮೀನು ಜಮೀನುದಾರರಿಗೆ ನಿರುಪಯುಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಂತಹ ಪ್ರಕರಣಗಳಲ್ಲಿ ಸಂಪೂರ್ಣ ಭೂಸ್ವಾಧೀನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಈ ಕುರಿತಂತೆ ಯಾವುದೇ ಪ್ರಕರಣಗಳು ಇರುವುದಿಲ್ಲ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇವರು ವರದಿಸಿರುತ್ತಾರೆ.
ಇ)	ಭೂಸ್ವಾಧೀನವಾದರೂ ಸಮೀಪ ರಸ್ತೆ ನಿರ್ಮಾಣ ಮಾಡದ ಕಾಮಗಾರಿಗಳು ಯಾವುವು (ಕಿಮೀ ವಹಿ ಮಾಹಿತಿ ನೀಡುವುದು)	ಸದರಿ ಕಾಮಗಾರಿಯ ಕರಾರು ಒಪ್ಪಂದದಂತೆ ಹೆದ್ದಾರಿಯ ಅಗಲೀಕರಣ, ಸರ್ವಿಸ್ ರಸ್ತೆ ನಿರ್ಮಾಣ, ಚರಂಡಿ ನಿರ್ಮಾಣ ಮತ್ತು ಇತರೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಮುಂದುವರೆದು, ರಾಜ್ಯ ಸರ್ಕಾರದ ವಿನಂತಿಯನ್ನು ಆಧರಿಸಿ ಮತ್ತು ಸದರಿ ಹೆದ್ದಾರಿಯ ಉದ್ದಕ್ಕೂ ಅಸ್ತಿತ್ವದಲ್ಲಿರುವ ವಸತಿ/ ಅಭಿವೃದ್ಧಿಯನ್ನು ಪರಿಗಣಿಸಿ ಈ ಕೆಳಕಂಡ ಭಾಗಗಳಲ್ಲಿ ಪ್ರಸ್ತಾಪಿತ ROW ಯನ್ನು ಕಡಿತಗೊಳಿಸಲಾಗಿದೆ. 1) ಅವರ್ಸ (ಕಿಮೀ 128.600 ಯಿಂದ 130.00=1.4 ಕಿಮೀ) 2) ಹೈದಿಪುರ್ (ಕಿಮೀ 183.700 ಯಿಂದ 185.750=2.05 ಕಿಮೀ) 3) ಕರ್ಕಿ (ಕಿಮೀ 187.800 ಯಿಂದ 189.380=1.50 ಕಿಮೀ) 4) ಹೊನ್ನವರ (ಕಿಮೀ 192.650 ಯಿಂದ 193.600=0.95 ಕಿಮೀ) 5) ಶಿರಾಳಿ (ಕಿಮೀ 224.730 ಯಿಂದ 225.800=1.070 ಕಿಮೀ) 6) ಭಟ್ಕಳ್(ಕಿಮೀ 227.540 ಯಿಂದ 230.647=3.107 ಕಿಮೀ)

ಈ)	ಬ್ರಹ್ಮಾವರದ ಆಕಾಶವಾಣಿ ಬಳಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣವು ಅವೈಜ್ಞಾನಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಸದರಿ ಹೆದ್ದಾರಿಯ ಬ್ರಹ್ಮಾವರ ಹಾಗೂ ಆಕಾಶವಾಣಿ ಭಾಗದಲ್ಲಿ ಕಾಮಗಾರಿಯನ್ನು ಕರಾರು ಒಪ್ಪಂದಂತೆ ಕೈಗೊಳ್ಳಲಾಗಿದೆ. ಮುಂದುವರೆದು ವಾಹನ ಸವಾರರ ಸ ಸುರಕ್ಷತೆಗಾಗಿ ಸುರಕ್ಷತಾ ಕ್ರಮಗಳಾದ ಸೈನ್ ಬೋರ್ಡ್, ರೋಡ್ ಮಾರ್ಕಿಂಗ್ ಲೈಟ್ಸ್, ಸ್ಟಡ್ ಹಾಗೂ ಇತರೆ ಸುರಕ್ಷತಾ ಕ್ರಮಗಳನ್ನು ಈ ಭಾಗದಲ್ಲಿ ಕೈಗೊಳ್ಳಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇವರು ವರದಿಸಿರುತ್ತಾರೆ.

ಕಡತ ಸಂಖ್ಯೆ: ಲೋಇ 120 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು